# ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01.

**ದಿನಾಂಕ: 14.07.2014ರಂದು ಸಂಜೆ 5.00ಗಂಟೆಗೆ ರೂಂ.ನಂ.106, ಮೊದಲನೇ ಮಹಡಿ, ವಿಧಾನ ಸೌಧ, ಬೆಂಗಳೂರು ಇಲ್ಲಿ ನಡೆದ ನಿಗಮದ 199ನೇ ನಿರ್ದೇಶಕರ ಮಂಡಳಿಯ ನಡವಳಿಗಳು**

**ಹಾಜರಾತಿ**

| **ಹೆಸರು ಮತ್ತು ಪದನಾಮ** | |
|---|---|
| ಶ್ರೀ ಹೆಚ್.ಆಂಜನೇಯ,<br>ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಮಾನ್ಯ ಅಧ್ಯಕ್ಷರು,<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ | ಅಧ್ಯಕ್ಷರು |
| ಶ್ರೀ ಎಂ.ಆರ್. ಕಾಂಬ್ಳೆ, ಭಾ.ಆ.ಸೇ.,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ | ಸದಸ್ಯರು |
| ಡಾ. ಆರ್. ರಾಜು, ಭಾ.ಅ.ಸೇ.,<br>ವ್ಯವಸ್ಥಾಪಕ ನಿರ್ದೇಶಕರು<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ | ಸದಸ್ಯ ಕಾರ್ಯದರ್ಶಿಗಳು |
| ಶ್ರೀ ಹೀರಾನಾಯಕ್, ಕೆ.ಎ.ಎಸ್.(ಎಸ್‌ಟಿಎಸ್)<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ | ಸದಸ್ಯರು |
| ಶ್ರೀ ರಾಮಚಂದ್ರಯ್ಯ,<br>ಸರ್ಕಾರದ ಉಪ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, | ಸದಸ್ಯರು |
| ಶ್ರೀಮತಿ ಎಲ್. ರಾಜೇಶ್ವರಿ<br>ಉಪ ಕಾರ್ಯದರ್ಶಿಗಳು,<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ | ಸದಸ್ಯರು |

**ಗೈರು ಹಾಜರಿ:**

| | |
|---|---|
| ಶ್ರೀ. ಎಸ್.ಎನ್.ಜಯರಾಂ, ಭಾ.ಆ.ಸೇ.,<br>ಆಯುಕ್ತರು,<br>ಸಮಾಜ ಕಲ್ಯಾಣ ಇಲಾಖೆ, | ಸದಸ್ಯರು |
| ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು<br>ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ಭಾರತ ಸರ್ಕಾರ, ನವದೆಹಲಿ, | ಸದಸ್ಯರು |
| ನಿರ್ದೇಶಕರು,<br>ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ,<br>ಭಾರತ ಸರ್ಕಾರ, ನವದೆಹಲಿ | ಸದಸ್ಯರು |

ನಿಗಮದ ವ್ಯವಸ್ಥಾಪಕ ನಿರ್ದೇಶಕರು, ಮಾನ್ಯ ಅಧ್ಯಕ್ಷರು ಮತ್ತು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಮತ್ತು ಹೊಸದಾಗಿ ನಿಗಮದ ನಿರ್ದೇಶಕರ ಮಂಡಳಿಯ ಸದಸ್ಯರಾಗಿ ನೇಮಕವಾಗಿರುವ ಶ್ರೀ.ಎಂ.ಆರ್. ಕಾಂಬ್ಳೆ, ಭಾ.ಆ.ಸೇ., ರವರನ್ನು ವಿಶೇಷವಾಗಿ ಸಭೆಗೆ ಸ್ವಾಗತಿಸಿದರು. ಶ್ರೀ.ಇ.ವೆಂಕಟಯ್ಯ, ನಿವೃತ್ತ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರು ಆಡಳಿತ ಮಂಡಳಿಯ ಸದಸ್ಯರಾಗಿ ನಿಗಮಕ್ಕೆ ನೀಡಿದ ಸೇವೆಯನ್ನು ಅಧಿಕೃತವಾಗಿ ದಾಖಲಿಸುತ್ತಾ ಇತರೆ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೋರಂ ಇರುವುದನ್ನು ಖಾತರಿಪಡಿಸಿ ಸಭೆ ನಡೆಸಬಹುದೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದರು. ಅಂತೆಯೇ 199ನೇ ಆಡಳಿತ ಮಂಡಳಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ಮಾನ್ಯ ಸಚಿವರು ಹಾಗೂ ನಿಗಮದ ಅಧ್ಯಕ್ಷರನ್ನು ಕೋರಿದರು. ಅಂತೆಯೇ ಜರುಗಿದ 199ನೇ ಆಡಳಿತ ಮಂಡಳಿ ಸಭೆಯ ವಿಷಯವಾರು ನಡವಳಿ.

**ವಿಷಯ ಸಂಖ್ಯೆ: 1 : 198ನೇ ನಿರ್ದೇಶಕರ ಮಂಡಳಿ ನಡವಳಿ ಅಂಗೀಕರಿಸುವ ಕುರಿತು**

ದಿನಾಂಕ:03.02.2014ರಂದು ನಡೆದ 198ನೇ ನಿರ್ದೇಶಕರ ಮಂಡಳಿಯು ತೆಗೆದುಕೊಂಡ ವಿಷಯವಾರು ತೀರ್ಮಾನದ ನಡವಳಿಯನ್ನು ಸರ್ವ ಸದಸ್ಯರಿಗೂ ಕಳುಹಿಸಲಾಗಿತ್ತು. ಯಾವುದೇ ಸದಸ್ಯರುಗಳಿಂದ ಸದರಿ ನಡವಳಿಯ ಬಗ್ಗೆ ವೈಯಕ್ತಿಕ ಅಭಿಪ್ರಾಯಗಳು ಬಾರದ ಪ್ರಯುಕ್ತ ಸಭೆಯು ಸದರಿ ನಡವಳಿಯನ್ನು ಯಥವತ್ತಾಗಿ ಅಂಗೀಕರಿಸಿತು.

**ವಿಷಯ ಸಂಖ್ಯೆ: 2 : 198ನೇ ನಿರ್ದೇಶಕರ ಮಂಡಳಿ ನಡವಳಿ ಮೇಲೆ ಕೈಗೊಂಡ ಅನುಸರಣಾ ವರದಿ**

198ನೇ ಆಡಳಿತ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಜರುಗಿಸಿದ ಕ್ರಮದ ಬಗ್ಗೆ ಸಭೆಯು ಪರಾಂಭರಿಸಿತು ಮತ್ತು ಯಥಾವತ್ತಾಗಿ ಒಪ್ಪಿತು.

**ವಿಷಯ ಸಂಖ್ಯೆ: 3 : 2014-15ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವ ಕುರಿತು**

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ನಿಗಮದ 2014-15ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಮಂಡಿಸುತ್ತಾ ರಾಜ್ಯ ಸರ್ಕಾರವು ತನ್ನ ಆಯವ್ಯಯದಲ್ಲಿ ನೀಡಿರುವ ರೂ.38740.00ಲಕ್ಷಗಳು ನಿಗಮದ ಇತಿಹಾಸದಲ್ಲೇ ಹೆಚ್ಚು ಅನುದಾನ ನೀಡಿರುವುದಕ್ಕೆ ಸರ್ಕಾರಕ್ಕೆ ಮತ್ತು ಮಾನ್ಯ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸಿದರು. ವಾರ್ಷಿಕ ಕ್ರಿಯಾ ಯೋಜನೆಯನ್ನು ಪರಾಂಭರಿಸಿದ ಆಡಳಿತ ಮಂಡಳಿಯು ಈ ಕೆಳಕಂಡಂತಹ ಅಭಿಪ್ರಾಯಗಳೊಂದಿಗೆ ಕ್ರಿಯಾ ಯೋಜನೆಯ ಆಯವ್ಯಯದ ಗೋಶ್ವಾರೆ ಮತ್ತು ಕ್ರಿಯಾ ಯೋಜನೆಯ ಅನುಬಂಧ-1 ಹಾಗೂ ಅನುಬಂಧ-2 ನ್ನು ಯಥಾವತ್ತಾಗಿ ಅನುಮೋದಿಸಿತು.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಯೋಜನೆಯ ಹೆಸರು ಮತ್ತು ಲೆಕ್ಕಶೀರ್ಷಿಕೆ | ಆಯವ್ಯಯದಲ್ಲಿ ನಿಗದಿಪಡಿಸಿದ ಹಣ | | |
|---|---|---|---|---|
| | | ರಾಜ್ಯ ಸರ್ಕಾರ | ಕೇಂದ್ರ ಸರ್ಕಾರ | ಒಟ್ಟು |
| 1 | 2225-01-190-2-01<br>ಸ್ವಯಂ ಉದ್ಯೋಗ ಯೋಜನೆ | 2000.00 | - | 2000.00 |
| 2 | 2225-01-102-0-11<br>ಸ್ವಯಂ ಉದ್ಯೋಗ ಯೋಜನೆ | 19485.00 | - | 19485.00 |
| 3 | 2225-01-190-2-09<br>ಮೈಕ್ರೋ ಕ್ರೆಡಿಟ್ (ಸಹಾಯಧನ) ಯೋಜನೆ | 1000.00 | - | 1000.00 |
| | 2225-01-190-2-01<br>ಮೈಕ್ರೋ ಕ್ರೆಡಿಟ್ (ಸಾಲ) ಯೋಜನೆ | 1020.00 | - | 1020.00 |
| 4 | 4225-01-190-0-01<br>ಷೇರು ಬಂಡವಾಳ | 5235.00 | - | 5235.00 |
| 5 | ಸಾಲ ಮನ್ನಾ ಯೋಜನೆ | 1000.00 | - | 1000.00 |
| | ಒಟ್ಟು | 38740.00 | - | 38740.00 |

- ಸ್ವಯಂ ಉದ್ಯೋಗ ಯೋಜನೆಯಡಿ ಸರ್ಕಾರದಿಂದ ನೀಡಿರುವ ಅನುದಾನದಲ್ಲಿ ನೇರಸಾಲ ಯೋಜನೆಯಡಿ ವಾಹನಗಳಿಗೆ ಹೆಚ್ಚಿನ ಆಧ್ಯತೆ ನೀಡುವುದು.
- ಕ್ರಿಯಾ ಯೋಜನೆಯಲ್ಲಿ ನಿಗದಿಪಡಿಸಿರುವ ಗುರಿಗೆ ಅನುಗುಣವಾಗಿ ಅರ್ಹ ಫಲಾಪೇಕ್ಷಿಗಳಿಗೆ ಸೌಲಭ್ಯ ಕಲ್ಪಿಸಲು ಪತ್ರಿಕೆಗಳಲ್ಲಿ ಪ್ರಕಟಣೆ ನೀಡಲು ಹಾಗೂ ಅರ್ಜಿಯನ್ನು ಸರಳೀಕೃತಗೊಳಿಸಿ ಅರ್ಜಿಗಳನ್ನು ಕರೆಯಲು ಅನುಮೋದಿಸಿತು.
- ಯೋಜನಾವಾರು ಗುರಿಯಲ್ಲಿ ಶೇ.20 ರಷ್ಟನ್ನು ನಿಗಮದ ಸಾಂಸ್ಥಿಕ ಗುರಿಯನ್ನಾಗಿ ಇರಿಸಿಕೊಳ್ಳಲು ಅನುಮೋದನೆ ನೀಡಿತು.

**ಮೇಲಿನ ಎಲ್ಲಾ ವಿಷಯಗಳು ಸೇರಿದಂತೆ ಒಟ್ಟಾರೆ ಕರಡು ವಾರ್ಷಿಕ ಯೋಜನೆ ಮತ್ತು ಆಡಳಿತ ನಿರ್ವಹಣೆ ವೆಚ್ಚಗಳಿಗೆ ನಿರ್ದೇಶಕ ಮಂಡಳಿ ಸಭೆಯು ಅನುಮೋದನೆ ನೀಡಿತು.**

**ವಿಷಯ ಸಂಖ್ಯೆ: 4 : ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 'ಸಿ' ಸಮೂಹದ ಅಧೀಕ್ಷಕರು/ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳ ವೃಂದವನ್ನು ನಿಗಮದ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು-2013ರನ್ವಯ ಬಿ' ಸಮೂಹದ ತಾಲ್ಲೂಕು ಅಭಿವೃದ್ಧಿ ಅಧಿಕಾಗಳ ಹುದ್ದೆಗೆ ಉನ್ನತಿಕರಿಸುವ ಸಂಬಂಧ ತಗುಲುವ ಆರ್ಥಿಕ ವೆಚ್ಚ ಕುರಿತು.**

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ನಿಗಮದಲ್ಲಿ ಪ್ರಸ್ತುತ 'ಸಿ' ಸಮೂಹದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧೀಕ್ಷಕರು/ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳ ವೃಂದದ ವಿವರಗಳನ್ನು ಸಭೆಗೆ ವಿವರಿಸಿದರು. ನಿಗಮದ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು-2013ರಲ್ಲಿ, ಅಧೀಕ್ಷಕರು ಮತ್ತು ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳ ಎರಡು ವೃಂದಗಳನ್ನು ಸೃಜಿಸಲಾಗಿದ್ದು, ತಾಲ್ಲೂಕು ಅಭಿವೃದ್ಧಿ ಅಧಿಕಾಗಳ ವೃಂದವು 'ಬಿ' ಗುಂಪಿಗೆ ಸೇರಿದ್ದಾಗಿರುತ್ತದೆ. ಮೂಲತ: ಎರಡೂ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧೀಕ್ಷಕರು ಮತ್ತು ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು "ಬಿ" ಗುಂಪಿನ ವೃಂದದಲ್ಲಿ ಕಾರ್ಯನಿರ್ವಹಿಸಲು ಇಚ್ಛಿಸುವ ನೌಕರರು ತಮ್ಮ ಸ್ವಇಚ್ಛೆಯಿಂದ ಹುದ್ದೆಯನ್ನು ಆಯ್ಕೆ ಮಾಡಿಕೊಂಡು ಲಿಖಿತವಾಗಿ ತಿಳಿಸಲು ಎರಡು ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ನಿಗಮದಿಂದ ಲಿಖಿತವಾಗಿ ಸೂಚಿಸಲಾಗಿತ್ತು. ಅಂತೆಯೇ 94 ಅಧೀಕ್ಷಕರು/ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳಲ್ಲಿ 86 ಮಂದಿ ಅಧೀಕ್ಷಕ/ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು 'ಬಿ' ಸಮೂಹದ ವೃಂದವನ್ನು ಆಯ್ಕೆ ಮಾಡಿಕೊಂಡಿರುವುದನ್ನು, 08 ಮಂದಿ ಪ್ರಸ್ತುತ ಅಧೀಕ್ಷಕರ ಹುದ್ದೆಯಲ್ಲಿಯೇ ಮುಂದುವರೆಯಲು ಆಯ್ಕೆ ಮಾಡಿಕೊಂಡಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಅಲ್ಲದೆ "ಸಿ" ಸಮೂಹದ ಅಧೀಕ್ಷಕ ವೃಂದದ ವೇತನ ಶ್ರೇಣಿ ರೂ:20000-36300 ಆಗಿದ್ದು, 'ಬಿ' ಸಮೂಹದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳ ವೇತನ ಶ್ರೇಣಿ ರೂ:22800-43200 ಇರುವುದನ್ನು ಸಭೆಯ ಗಮನಕ್ಕೆ ತರಲಾಯಿತು.

ವಿಷಯವನ್ನು ವಿವರವಾಗಿ ಚರ್ಚಿಸಿದ ಆಡಳಿತ ಮಂಡಳಿಯು, ಹೊಸದಾಗಿ ಸೃಜಿಸಲಾಗಿರುವ "ಬಿ" ಸಮೂಹದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳ ಶ್ರೇಣಿಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು-2013ರಲ್ಲಿರುವಂತೆ ನೇರನೇಮಕಾತಿ ಶೇ.75 ಭಾಗ ಹಾಗೂ ಕಛೇರಿ ಅಧೀಕ್ಷಕರ ವೃಂದದಿಂದ ಮುಂಬಡ್ತಿ ಮೂಲಕ ಶೇ.25 ಭಾಗ ತುಂಬಬೇಕಾಗಿರುವುದನ್ನು ಗಣನೆಗೆ ತೆಗೆದುಕೊಂಡು, ಈ ಎರಡು ವೃಂದಗಳ ಮೂಲ ಜೇಷ್ಠತೆಯನ್ನು ಗಣನೆಗೆ ತೆಗೆದುಕೊಂಡು, ಜೇಷ್ಠತೆಯ ಆಧಾರದಲ್ಲಿ ಅರ್ಹರಾದ ಮತ್ತು ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳ ಹುದ್ದೆಯನ್ನು ಆಯ್ಕೆ ಮಾಡಿಕೊಂಡಿರುವ ನೌಕರರುಗಳನ್ನು ಹೊಸದಾಗಿ ಸೃಜಿಸಲಾಗಿರುವ ಗ್ರೂಫ್ **"ಬಿ"** ವೃಂದದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳ ಶ್ರೇಣಿಗೆ ಪರಿಗಣಿಸಬಹುದಾಗಿದೆ ಎಂದು ತೀರ್ಮಾನಿಸಿತು. ಆದರೆ ಈ ಪ್ರಕ್ರಿಯೆ ಪೂರ್ಣ ವಿವರಗಳನ್ನು, ಅರ್ಹ ನೌಕರರುಗಳ ಜೇಷ್ಠತಾ ಪಟ್ಟಿಯನ್ನು ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಸಾರ್ವಜನಿಕ ಉದ್ದಿಮೆಗಳ ಇಲಾಖೆ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಸೇವಾ ನಿಯಮಾವಳಿಗಳು) ಅಭಿಪ್ರಾಯ ಪಡೆದು ಮುಂದಿನ ಸೂಕ್ತ ಕ್ರಮ ಕೈಗೊಳ್ಳುವಂತೆ ಮಂಡಳಿಯು ತೀರ್ಮಾನಿಸಿತು.

**ವಿಷಯ ಸಂಖ್ಯೆ: 5 : ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ಬಾಕಿ ಉಳಿದ 4608 ಕೊಳವೆಬಾವಿಗಳನ್ನು ಪರಿಷ್ಕೃತ ಘಟಕ ವೆಚ್ಚದಲ್ಲಿ ಕೊರೆಯುವ ಬಗ್ಗೆ**

ಸದರಿ ವಿಷಯವನ್ನು ಚರ್ಚಿಸಿದ ನಿರ್ದೇಶಕರ ಮಂಡಳಿಯು, 198ನೇ ನಿರ್ದೇಶಕ ಮಂಡಳಿ ಸಭೆಯಲ್ಲಿ ತೀರ್ಮಾನಿಸಿದಂತೆ 2009–10ನೇ ಸಾಲಿನಿಂದ 2011–12ನೇ ಸಾಲಿನವರೆವಿಗೆ ಮಾನ್ಯ ಶಾಸಕರುಗಳು, ಮಾನ್ಯ ಸಮಾಜ ಕಲ್ಯಾಣ ಸಚಿವರು ಹಾಗೂ ನಿಗಮದ ಅರ್ಧಕ್ಷರು ಸೇರಿದಂತೆ ವಿವೇಚನಾ ಭಾಗದಡಿ ಆಯ್ಕೆಯಾಗಿ ಕೊರೆಯದೆ ಬಾಕಿ ಇರುವ 4608 ಫಲಾಪೇಕ್ಷಿಗಳ ದೃಡೀಕೃತ ಪಟ್ಟಿಯನ್ನು ಸಭೆಯು ಪರಾಂಭರಿಸಿತು. ಸದರಿ ಪರಿಶೀಲನೆಯಿಂದ 4608 ದೃಡೀಕೃತ ಪಟ್ಟಿಯಲ್ಲಿ ಸೌಲಭ್ಯಕ್ಕೆ ವಿವಿಧ ಕಾರಣಗಳಿಂದ ಅನರ್ಹರಾಗಿರುವ 652 ಅರ್ಜಿಗಳನ್ನು ಪುರಸ್ಕರಿಸಲು ಸಾಧ್ಯವಿಲ್ಲ ಎಂಬುದನ್ನು ತೀರ್ಮಾನಿಸಿ ಅಂತಿಮವಾಗಿ 3956 ಅರ್ಹ ಫಲಾನುಭವಿಗಳ ಪಟ್ಟಿಯನ್ನು ಒಪ್ಪಿತು. ಈ ಕೆಳಗೆ ನಮೂದಿಸಲಾಗಿರುವ ಫಲಾಪೇಕ್ಷಿಗಳ ಜಿಲ್ಲಾವಾರು ಪಟ್ಟಿಯನ್ನು ಯಾವುದೇ ಕಾರಣದಿಂದ ಆಡಳಿತ ಮಂಡಳಿಯ ಗಮನಕ್ಕೆ ತಾರದೆ ಪರಿಷ್ಕರಿಸದಿರಲು ತೀರ್ಮಾನಿಸಲಾಯಿತು.

| ಕ್ರಸ | ಜಿಲ್ಲೆ | ಶಾಸಕರ ಕೋಟಾ | ವಿವೇಚನಾ ಕೋಟಾ | ಸಚಿವರ ಕೋಟಾ | ಒಟ್ಟು |
|---|---|---|---|---|---|
| 01 | ಮೈಸೂರು | 18 | 277 | 20 | **315** |
| 02 | ಮಂಡ್ಯ | 20 | 35 | 02 | **57** |
| 03 | ಚಾಮರಾಜನಗರ | 102 | 538 | – | **640** |
| 04 | ಚಿಕ್ಕಮಗಳೂರು | 34 | 56 | 20 | **110** |
| 05 | ಹಾಸನ | 115 | 116 | 12 | **243** |
| 06 | ದಕ್ಷಿಣ ಕನ್ನಡ | 95 | – | – | **95** |
| 07 | ಕೊಡಗು | 55 | – | – | **55** |
| 08 | ಉಡುಪಿ | 36 | 02 | – | **38** |
| 09 | ಬೆಂಗಳೂರು ನಗರ | 310 | 0 | 0 | **310** |
| 10 | ಬೆಂಗಳೂರು (ಗ್ರಾ) | 282 | 02 | 04 | **288** |
| 11 | ರಾಮನಗರ | 98 | 0 | 0 | **98** |
| 12 | ಕೋಲಾರ | 39 | 46 | 53 | **138** |
| 13 | ಚಿಕ್ಕಬಳ್ಳಾಪುರ | 18 | 74 | 08 | **100** |
| 14 | ತುಮಕೂರು | 09 | 54 | 16 | **79** |
| 15 | ಚಿತ್ರದುರ್ಗ | 01 | 27 | 16 | **44** |
| 16 | ದಾವಣಗೆರೆ | 53 | 0 | 15 | **68** |
| 17 | ಶಿವಮೊಗ್ಗ | 29 | 0 | 35 | **64** |
| 18 | ಬೀದರ್ | 114 | 92 | 15 | **221** |
| 19 | ರಾಯಚೂರು | – | 60 | 09 | **69** |
| 20 | ಯಾದಗಿರಿ | – | 90 | 10 | **100** |
| 21 | ಕೊಪ್ಪಳ | – | – | 04 | **4** |
| 22 | ಬಳ್ಳಾರಿ | – | 04 | 04 | **8** |
| 23 | ಗುಲ್ಬರ್ಗಾ | 145 | 67 | 02 | **214** |
| 24 | ಬೆಳಗಾಂ | 100 | 87 | – | **187** |
| 25 | ಹಾವೇರಿ | 68 | 09 | – | **77** |
| 26 | ಧಾರವಾಡ | 26 | 05 | – | **31** |
| 27 | ಬಿಜಾಪುರ | 44 | 45 | – | **89** |
| 28 | ಗದಗ | 94 | – | – | **94** |
| 29 | ಬಾಗಲಕೋಟೆ | 115 | 05 | – | **120** |
| | **ಒಟ್ಟು** | **2020** | **1691** | **245** | **3956** |